Land Revenue Arrears

41. Sri MAHADEV G. BANAKAR (Byadgi).—

Will the Minister for Revenue and Forests be pleased to state :—

(*a*) out of all the Districts in the State which is the District which is having highest accumulation of Land Revenue arrears ;

(*b*) arrears of Land Revenue (Districtwise) up-to-date ;

(*c*) what are the reasons for not recovering the arrears ;

(*d*) the steps taken by Government in this regard ?

A.—Sri B. RACHAIAH (Minister for Revenue and Forests).—

(*a*) Raichur district.

(*b*) As in the Statement appended.

(*c*) Adverse seasonal conditions and successive drought for two years in some of the districts of the State.

(*d*) Monthly targets have been fixed by Deputy Commissioners for recovery of arrears.

STATEMENT

ARREARS OF LAND REVENUE

1.	Chickmagalur	...	3,00,630-00
2.	Shimoga	...	32,87,589-00
3.	Gulbarga	...	24,90,259-00
4.	Bangalore	...	59,64,690-00
5.	Tumkur	...	35,66,097-00
6.	Coorg	...	12,52,498-00
7.	Raichur	...	1,20,93,945-00
8.	Hassan	...	59,33,316-00
9.	Mandya	...	59,11,141-00
10.	Belgaum	...	1,60,783-00
11.	South Kanara	...	2,73,971-00
12.	Bellary	...	38,73,090-00
13.	North Kanara	...	4,59,545-00
14.	Bijapur	...	97,327-00
15.	Bidar	...	17,29,182-00
16.	Dharwar	...	2,22,685-00
17.	Mysore	...	78,18,153-00
18.	Kolar	...	54,72,355-00
19.	Chitradurga	...	33,38,427-00
	Total	...	6,42,45,683-00

ಶ್ರೀ ಮಹದೇವ ಜಿ. ಬಣಕಾರ್.—ಉತ್ತರದಲ್ಲಿ ಒಟ್ಟು 6,42,15,683 ರೂಪಾಯಿಗಳಷ್ಟು ಕಂದಾಯದ ಹಣ ಬಾಕಿ ಇದೆ ಎಂದು ತಿಳಿಸಿದ್ದೀರಿ. ಇದರ ಜೊತೆಗೆ ಅಯಾ ಜಿಲ್ಲೆಯ ಡೆಪ್ಯುಟಿ ಕಮಿಷನರವರು ಎಷ್ಟು ಹಣವನ್ನು ಪ್ರತಿ ತಿಂಗಳೂ ವಸೂಲು ಮಾಡಬೇಕೆನ್ನುವುದನ್ನು ನಿಗದಿ ಮಾಡುತ್ತಾರೆ ಎಂದು ಹೇಳಿದ್ದೀರಿ, ಎಂದರೆ ಯಾವ ರೀತಿಯಲ್ಲಿ ವಸೂಲು ಮಾಡಬೇಕೆಂದು ನಿಗದಿ ಮಾಡಿದ್ದೀರಿ ?

ಶ್ರೀ ಬಿ. ರಾಚಯ್ಯ.—ಇದನ್ನು ಕಂತುಗಳಲ್ಲಿ ವಸೂಲು ಮಾಡಬೇಕೆಂದು ಹೇಳಲಾಗಿದೆ. ನುಮಾರು ನಾಲ್ಕು ಕಂತುಗಳೊಳಗೆ ಪೂರ್ತಿಯಾಗಿ ವಸೂಲು ಮಾಡಬೇಕೆಂದು ನೂಚಿಸಲಾಗಿದೆ.

ಶ್ರೀ ಮಹದೇವ ಜಿ. ಬಣಕಾರ್.—ಉತ್ತರ ಕರ್ನಾಟಕದ ಭಾಗದಲ್ಲಿ ಒಂದು ವರ್ಷದೊಳಗೆ ಭೂಕಂದಾಯವನ್ನು ಬಾಕಿಯಾಗಿ ಉಳಿಸಿಕೊಂಡಿದ್ದರೆ ಅಂತಹವರ ಮೇಲೆ ಕ್ರಮ ತೆಗೆದುಕೊಳ್ಳಲು ಅವರ ಆಸ್ತಿಗಳನ್ನು ಜಪ್ತುಮಾಡಿ ಹರಾಜು ಹಾಕುವ ಪದ್ಧತಿ ಇದೆ. ಅದೇ ಪದ್ಧತಿ ದೇಶದ ಇತರ ಭಾಗಗಳಲ್ಲೂ ಇದೆಯೇ ?

ಶ್ರೀ ಬಿ. ರಾಚಯ್ಯ.—ಆ ಪದ್ಧತಿ ಅಲ್ಲಿ ಇತ್ತು. ಇದನ್ನು ಈಗ ನಾಲ್ಕು ಕಿಸ್ತುಗಳಲ್ಲಿ ಕೊಡಬೇಕು, ಇಲ್ಲದೆ ಇದ್ದರೆ ಅವರಲ್ಲರುವ ಚರಸ್ವತ್ತುಗಳನ್ನು ಹರಾಜು ಹಾಕಿ ತೆಗೆದುಕೊಳ್ಳಬೇಕು ಎಂದು ಇದೆ. ಈಗ ಈ ಪದ್ಧತಿಗಳನ್ನೆರ್ಲಾ ಬದಲಾವಣೆ ಮಾಡಲಾಗಿದೆ.

ಶ್ರೀ ಕೆ. ಪಿ. ಚಿಕ್ಕೇಗೌಡ.—ಕಂದಾಯ ಬಾಕಿಯಲ್ಲದೆ ಬೇರೆ ಬಾಬುಗಳಿಗೂ ಸರಕಾರ ಸಾಲಗಳನ್ನು ಕೊಟ್ಟಿದೆ. ಇವುಗಳಲ್ಲಿ ಭೂಕಂದಾಯವನ್ನು ಕೊಡಲು ರೈತರಿಗೆ ಸರಿಯಾದ ಬೆಳೆಯಾಗದೇ ಹೋದರೆ ಬಾಕಿ ನಿಲ್ಲುತ್ತದೆ. ಇಂತಹ ಸಂದರ್ಭಗಳಲ್ಲಿ ಸರಕಾರ ಬಾಕಿ ಇರುವ ಕಂದಾಯಕ್ಕೆ ಏನಾಯಿತಿ ಕೊಡಲು ಯೋಚಿಸುತ್ತಾರೆಯೇ ?

ಶ್ರೀ ಬಿ. ರಾಚಯ್ಯ.—ರೆವೆನ್ಯೂ ಕಂದಾಯ ಇದರ ಜೊತೆಗೆ ವಾಟರು ರೇಟು ಮತ್ತು ಸರ್ ಚಾರ್ಜು ಇವೆರ್ಲಾ ಇಲ್ಲಿ ಸೇರಿಲ್ಲ. ಇವುಗಳನ್ನೆಲ್ಲ ಒಟ್ಟು ಸೇರಿಸಿದರೆ ಇದೇ ನುಮಾರು 15—16 ಕೋಟಿಯಷ್ಟು ಆಗುತ್ತದೆ. ಇಲ್ಲಿ ಬರೀ ಭೂ ಕಂದಾಯ ಮಾತ್ರ ಬಾಕಿ ಇರುವುದನ್ನು ಹೇಳಲಾಗಿದೆ ಇದನ್ನು ನುಮಾರು ನಾಲ್ಕು ಕಂತುಗಳಲ್ಲಿ ಪಾವತಿ ಮಾಡಲು ಅನುಕೂಲ ಮಾಡಲಾಗಿದೆ. ಅಲ್ಲದೆ ಈಚೆಗೆ ಸರಕಾರದವರು ಲ್ಯಾಂಡ್ ರೆವೆನ್ಯೂ ರೂಲ್ಸುಗಳನ್ನು ಫ್ಲೆಕ್ಸಿಬಲ್ಲೈಸು ಮಾಡಿಯಾಗಿದೆ. ಇದರಿಂದ ಉತ್ತರ ಕರ್ನಾಟಕದ ಭಾಗಗಳಲ್ಲಿ ಏನು ರಿಯಾಯಿತಿ ಕೊಡಲಾಗಿದೆ ಅಂತಹ ಸೌಲಭ್ಯಗಳನ್ನು ಇತರ ಕಡೆಗೂ ಕೊಡಲಾಗುತ್ತದೆ. ಇದರಂತೆ ಅಯಾ ಜಿಲ್ಲಾಧಿಕಾರಿಗಳಿಗೂ ಸೂಚನೆಗಳನ್ನು ಕಳುಹಿಸಲಾಗಿದೆ. ಅಲ್ಲದೆ ಅಭಾವದ ಪ್ರದೇಶಗಳಲ್ಲಿ ಕೂಡ ಯಾವ ರೀತಿಯಾದ ರಿಯಾಯಿತಿಗಳನ್ನು ಕೊಡಬೇಕು ಅದನ್ನೂ ಕೊಡಬೇಕೆಂದು ಸೂಚನೆ ಕೊಡಲಾಗಿದೆ.

Sri J. P. SARWESH.—In reply to (d) it is stated that monthly targets have been fixed by Deputy Commissioners for recovery of arrears. I want to know whether the work of recovering the arrears is working satisfactorily ?

Sri B. RACHAIAH.— It is not so satisfactorily working.

ಶ್ರೀ ಜಿ. ತಮ್ಮಯ್ಯ.—ಸ್ವಾಮಿ, ಅರಿಯರ್ಸ್ ಪಟ್ಟಿಯನ್ನು ನೋಡಿದರೆ ಕ್ಷಾಮ ಇರುವ ಜಿಲ್ಲೆಗಳಲ್ಲ ಕಡಿಮೆ ಇದೆ. ಮಂತ್ರಿಗಳು ಇರುವ ಜಿಲ್ಲೆಗಳಲ್ಲಿ ಜಾಸ್ತಿ ಇದೆ ಕಾರಣ ಏನು ?

ಶ್ರೀ ಬಿ. ರಾಚಯ್ಯ.—ವಾಟರ್ ರೇಟ್ ಸೇರಿದೆ. ಸರ್‌ಚಾರ್ಜು ಹೆಚ್ಚಾಗಿದೆ. ರಾಯಚೂರು ಮೈಸೂರು ಕೆಲವು ಭಾಗಗಳಲ್ಲಿ ಅಲ್ಲಿ ನೀರು ಕಂದಾಯ ಇದೆ. ಅದರಿಂದ ಹೆಚ್ಚಾಗಿದೆ.

ಶ್ರೀ ಎಸ್. ಗೋಪಾಲಗೌಡ.—ನುಮಾರು ಆರೂವರೆ ಕೋಟಿ ರೂಪಾಯಿಯಷ್ಟು ಕಂದಾಯ ಬಾಕಿ ಇದೆ ಎಂದು ತಿಳಿಸಿದ್ದೀರಿ. ರಾಯಚೂರಿನಲ್ಲಿ 1 ಕೋಟಿ 20 ಲಕ್ಷದ ಮೇಲೆ ಕಂದಾಯ ಬಾಕಿ ಇದೆ. ಕಂದಾಯ ಬಾಕಿ ಮುಖ್ಯವಾಗಿ ಯಾವ ಕಾರಣದಿಂದ ಇದೆ ? ಕ್ಷಾಮ ಪರಿಸ್ಥಿತಿ ಇದ್ದು ರೆಮಿಟ್ ಮಾಡಬೇಕು ಎಂದು ಕೇಳಿ, ರೆಮಿಟ್ ಮಾಡದೇ ಇತರಕ್ಕ ಬಾಕಿಯೇ ? ಅಥವಾ ವಸೂಲು ಆಗದೇ ಹರಾಜು ಮಾಡಿ ವಸೂರ್ ಮಾಡಿಕೊಳ್ಳಬೇಕಾದ ಬಾಕಿಯೇ ? ವಿವರ ಕೊಡುವುದಕ್ಕೆ ಸಾಧ್ಯವೇ ?

ಶ್ರೀ ಬಿ. ರಾಚಯ್ಯ.—ಕಳೆದ ವರ್ಷ 65-66 ನೇ ಸಾಲು ಮತ್ತು 66-67 ನೇ ಸಾಲಿನಲ್ಲಿ ಕೆಲವು ಭಾಗದಲ್ಲಿ ಮಳೆಅಭಾವದಿಂದ ಕಂದಾಯ ವಸೂಲಿ ಮಾಡತಕ್ಕದನ್ನು ತಡೆಹಿಡಿದು ಮೂರು ತಿಂಗಳಕಾಲ ಸರ್ಕಾರದವರು ತೀವ್ರತರವಾದ ಯಾವ ಕಾರ್ಯಕ್ರಮವನ್ನೂ ಕೈಗೊಳ್ಳಲಿಲ್ಲ.

ಶ್ರೀ ಎಸ್. ಗೋಪಾಲಗೌಡ.—ಅದು ಜುನಾವಣೆ ಸಮಯದಲ್ಲಿಯೇ ?

ಶ್ರೀ ಬಿ. ರಾಚಯ್ಯ.—ಹೌದು, ಏನು ಮಾಡುವುದಕ್ಕೆ ಆಗುತ್ತದೆ ? 3 ತಿಂಗಳ ಕಾಲ ತಡೆ ಹಿಡಿದಿದ್ದೆವು. ಬೆಳೆ ಆಗಲಿಲ್ಲ. ಈಗಲೂ ಕೂಡ ತೀವ್ರತರವಾಗಿ ವಸೂಲು ಮಾಡಬೇಕೆಂದು ಧೈರ್ಯ ಕೊಟ್ಟರೆ ವಸೂಲು ಮಾಡುತ್ತೇವೆ ಒಂದು ಸಂತೋಷದ ಸಮಾಚಾರ ಎಂದರೆ, ಸದಸ್ಯರು ತೀವ್ರವಾಗಿ ವಸೂಲು ಮಾಡಿ ಎಂದು ಹೇಳಿದ್ದಾರೆ.

Sri H. V. KOUJALGI.—May I know whether in this list of arrears any amount of arrears is due before the date of integration ? If so, what steps are taken to recover it ?

Sri B. RACHAIAH.—These arrears are not due before integration.

ಶ್ರೀ ಎಸ್. ಶಿವಪ್ಪ.—ಈಗಾಗಲೇ ಮೈಸೂರು ಬೇಶದ ಹಲವಾರು ಜಿಲ್ಲೆಗಳಿಂದ ಅಭಾವ ಪರಿಸ್ಥಿತಿ ಮತ್ತು ಕ್ಷಾಮ ಪರಿಸ್ಥಿತಿಯಿಂದಾಗಿ ಮಳೆ ಬಾರದೆ ಬೆಳೆ ಕೆಟ್ಟು ಹೋಗಿರುವುದು ಸರ್ಕಾರಕ್ಕೆ ಕಂಡು ಬಂದರೂ ತಾವು ಇನ್ನೂ ಕೂಡ ಕಂದಾಯ ರದ್ದು ಮಾಡುವ ಆಜ್ಞೆ ಮಾಡದೇ ಇರುವುದಕ್ಕೆ ಕಾರಣ ಏನು ?

ಶ್ರೀ ಬಿ. ರಾಚಯ್ಯ.—ಮಳೆ ಅಭಾವದಿಂದ ಕಂದಾಯ ರದ್ದು ಮಾಡಬೇಕು ಎಂದು ರೈತರಿಂದ ಯಾವ ಮನವಿಗಳೂ ಬಂದಿಲ್ಲ.

Mr. SPEAKER.—The question is to recover and not to remit. If the member wants information about remission, he may put a separate question.

ಶ್ರೀ ಎಸ್. ಶಿವಪ್ಪ.—ಈಗ ಮಳೆ ಬಾರದೆ ಬೆಳೆ ಹೋಗಿ ಕ್ಷಾಮ ಪರಿಸ್ಥಿತಿ ಇರತಕ್ಕ ಪ್ರದೇಶಗಳಲ್ಲಿ ತಾವು ಕಂದಾಯವನ್ನು ಈ ವರ್ಷಕ್ಕೆ ಪೂರ್ಣವಾಗಿ ವಜಾ ಮಾಡುವುದನ್ನು ಏತಕ್ಕೆ ಯೋಚನೆ ಮಾಡಲಿಲ್ಲಾ ?

ಅಧ್ಯಕ್ಷರು.—ಈ ಪ್ರಶ್ನೆಯಲ್ಲಿ ವಸೂಲು ಏತಕ್ಕೆ ಮಾಡಲಿಲ್ಲಾ ಎಂದು ಕೇಳುವುದೇ ವಿನಾ ರದ್ದಿಯಾತಿ ಪ್ರಶ್ನೆ ಬರುವುದಿಲ್ಲ. ಅಂತಹ ಉಪಪ್ರಶ್ನೆಯನ್ನು ಕೇಳುವುದಕ್ಕೆ ಸಾಧ್ಯವಿಲ್ಲ.

ಶ್ರೀ ಎಸ್. ಶಿವಪ್ಪ.—ಮಾನ್ಯ ಮಂತ್ರಿಗಳು ಮಾತನಾಡುತ್ತಾ ವರದಿಗಳನ್ನು ನಿರೀಕ್ಷಣೆ ಮಾಡುತ್ತೇವೆಂದು ಹೇಳಿದರು. ಎಲ್ಲೆಲ್ಲಿ ಅಭಾವ ಪ್ರದೇಶಗಳಿವೆಯೋ ಅಲ್ಲಿಂದ ಈಗಾಗಲೇ ಅಂತಹ ವರದಿಗಳು ಬಂದಿದ್ದರೂ ಅವುಗಳ ಬಗ್ಗೆ ಇದುವರೆಗೇನೂ ಕ್ರಮ ತೆಗೆದುಕೊಳ್ಳದೆ ವಿಳಂಬ ಮಾಡುವುದಕ್ಕೇನು ಕಾರಣ ? ವರದಿ ಬಂದ ತಕ್ಷಣ ಬಾಕಿಯನ್ನು ವಜಾಮಾಡುತ್ತೇವೆಂದು ಬೇರೆ ಹೇಳುತ್ತಾರೆ. ಆಗಲೇ ವರದಿಗಳು ಬಂದಿದ್ದರೂ ಏಕೆ ಇನ್ನೂ ಕ್ರಮ ತೆಗೆದುಕೊಳ್ಳಲಿಲ್ಲ.

1-30 P.M.

Mr. SPEAKER.—It does not arise out of the Main question and so it is disallowed.

Sri H. SIDDAVEERAPPA.—In view of the oft-repeated pronouncement by the Government that land revenue will be abolished, why are they not thinking of remitting the little amount that is due to them ?

Mr. SPEAKER.—How does it arise out of this ? The proposition before the House is with regard to recovery of arrears of land revenue.

Sri H. SIDDAVEERAPPA.—One of the reasons probably in the mind of the Hon'ble Member was that in view of the oft-repeated pronouncement, why are they not thinking...

Mr. SPEAKER.—The hon. member is are projecting a new idea into his mind.

ಶ್ರೀ ಎಸ್. ಗೋಪಾಲಗೌಡ.—ಭೂಕಂದಾಯದ ಬಾಕಿ ಪ್ರತಿವರ್ಷವೂ ಆಗುತ್ತಾ ಇರುವುದರಿಂದ ಮತ್ತು ಈಚೆಗೆ ಸರ್‌ಚಾರ್ಜು ಬೇರೆ ಹಾಕಿದ್ದರಿಂದ ಮತ್ತು ಕಾಲಕಾಲಕ್ಕೆ ಮಳೆಬೆಳೆ ಸರಿಯಾಗಿ ಆಗದೇ ಇರುವುದರಿಂದ ಹಾಗೂ ಸರ್ಕಾರದವರು ಕ್ರಮವಾಗಿ ರೆಮಿಟ್ ಮಾಡದೇ ಇರುವುದರಿಂದ ಈ ರೀತಿ ಬಾಕಿಯಾಗಿರುವುದು ಅಲ್ಲವೇ ಇದಕ್ಕೆ ತಾವು ಸ್ವಲ್ಪ ವಿವರಗಳನ್ನು ಕೊಡಬೇಕು. ಈ ಜಿಲ್ಲೆಗೆ ಸಂಬಂಧಪಟ್ಟಹಾಗೆ ಪ್ರಶ್ನೆ ಮೊದಲೇ ಹಾಕಿದಾಗ 1965—1966 ಮತ್ತು 1966—67 ನೇ ಸಾಲಿನಲ್ಲಿ ಸರ್‌ಚಾರ್ಜು ಹಾಕಿದಮೇಲೆ ಬಾಕಿ ಇದು ಎಂದು ಹೇಳಿದಿರಿ. ಆದನ್ನು ನೀವೇ ರೈತರಿಂದ ಬರಬೇಕಾದ ಬಾಕಿ ಎಂದು ಬರೆದುಕೊಂಡಿರುವುದರಿಂದ ರೈತರು ಕಂದಾಯ ಕೊಟ್ಟಾದ ಮೇಲೆ ಈ ಬಾಕಿಯನ್ನು ಉಳಿಸಿದ್ದೀರಾ, ಹೇಗೆ?

ಶ್ರೀ ಬಿ. ರಾಚಯ್ಯ.—ಆದು ಆ ರೀತಿಯಲ್ಲ. ಈ ಕಂದಾಯ ಬಾಕಿ ನಿಂತಿರುವುದಕ್ಕೆ ಕೆಲವು ಕಾರಣಗಳಿವೆ. ಕೆಲವು ಕಡೆ ಮಳೆ ಸಕಾಲದಲ್ಲಿ ಆಗದೇ ಇರುವುದು, ಮತ್ತೊಂದು ಕಡೆ ಸರ್‌ಚಾರ್ಜು ಹೆಚ್ಚಾಗಿದೆಯೆಂಬುದು, ಲ್ಯಾಂಡ್ ರೆವಿನ್ಯೂ ರಿವಿಷನ್ ಮಾಡಿದ್ದು ಹೆಚ್ಚಾಗಿದೆಯೆಂಬುದು, ಜೊತೆಗೆ ಗ್ರಾಮಾಧಿಕಾರಿಗಳ ಅನುವಂಶಿಕ ಹಕ್ಕು ರದ್ದಾದಮೇಲೆ ಅವರು ಹೆಚ್ಚು ಆಸಕ್ತಿ ವಹಿಸಿ ಕಂದಾಯವನ್ನು ವಸೂಲುಮಾಡದೇ ಇರುವುದು ಇವೆಲ್ಲ ಕಾರಣಗಳಿಂದ ಬಾಕಿ ಉಳಿಯುವುದಕ್ಕೆ ಅವಕಾಶವಾಯಿತು.

Dr. R. NAGAN GOWDA.—May I know, Sir, for how many years these amounts have been accumulating? Are they for the last year or for a number of years?

Sri B. RACHAIAH.—It is an accumulation of two years.

ಶ್ರೀ ಎಂ. ನಾಗಪ್ಪ.—ರಾಯಚೂರು ಜಿಲ್ಲೆಯಲ್ಲಿ ಕಂದಾಯ ಬಾಕಿ ಉಳಿಯುವುದಕ್ಕೆ ಫೀಡರ್ ಚಾನಲ್ ತಯಾರುಮಾಡದೆ ಸರಿಯಾಗಿ ನೀರಾವರಿ ಸೌಕರ್ಯ ಮುಟ್ಟಿಸಿರದೆ ಹೋಗಿದ್ದರೂ ಅಂತಹ ಜಮೀನುಗಳಿಗೂ ಸಹ ನೀವು ಕಂದಾಯ ಹಾಕಿದ್ದೀರಿ. ನೀರು ಕೆಲವು ಕಡೆಗಳಲ್ಲಿ ಉಪಯೋಗಿಸದೇ ಇದ್ದರೂ ಅಲ್ಲಿಯೂ ಕಂದಾಯ ವಸೂಲು ಮಾಡಬೇಕೆಂದು ಬಾಕಿ ತೋರಿಸಿದ್ದೀರಿ. ನೀರು ಮುಟ್ಟದೇ ಇರುವ ಜಮೀನುಗಳ ಮೇಲೆ ವಾಟರ್ ರೇಟ್ ಹಾಕಿದ್ದರೂ ಅವರೆಲ್ಲರೂ ಅದನ್ನು ಕೊಟ್ಟಿದ್ದಾರೆಂಬುದು ತಮ್ಮ ಗಮನಕ್ಕೆ ಬಂದಿದೆಯೇ?

ಶ್ರೀ ಬಿ. ರಾಚಯ್ಯ.—ಯಾರ್ಯಾರಿಗೆ ನೀರು ಕೊಟ್ಟಿದೆಯೋ ಅವರಿಗೆ ಮಾತ್ರ ನೀರಿನ ಕಂದಾಯ ಹಾಕಿದ್ದೇವೆ. ಆದರ ಪ್ರಕಾರ ಬಾಕಿ ಉಳಿದಿದೆ.

ಶ್ರೀ ಮಹದೇವ ಜಿ. ಬಣಕಾರ್.—ಸರ್ಕಾರ ನಿಗದಿಮಾಡಿದ ಕಾರ್ಯಕ್ರಮದ ಪ್ರಕಾರ ಕಂದಾಯ ಬಾಕಿಯನ್ನು ವಸೂಲ್ಮಾಡುವ ಬಗ್ಗೆ ಉಗ್ರವಾದ ಕ್ರಮಗಳನ್ನು ಕೈಗೊಂಡ ಅಧಿಕಾರಿಗಳನ್ನು ಅವರ ಅವಧಿ ಮುಗಿಯುವುದಕ್ಕೆ ಮುಂಚಿತವಾಗಿಯೇ ಅವರನ್ನು ವರ್ಗಮಾಡಿರುವುದು ಸರಿಯೇ?

Mr. SPEAKER.—How does it arise out of this? Transfers of Officers does not come under this, The member may put a fresh question and he will get the answer,

ಶ್ರೀ ಎನ್. ಹುಚ್ಚಮಾಸ್ತಿಗೌಡ.—ಈಗತಾನೆ ಮಾನ್ಯ ಮಂತ್ರಿಗಳು ಹೇಳಿದರು. ನಾಲ್ಕು ಕಂತುಗಳಲ್ಲಿ ವಸೂಲು ಮಾಡುವುದಕ್ಕೆ ಏರ್ಪಾಡು ಮಾಡಿದೆ ಎಂದು. ಮೊನ್ನೆ ತಿಪಟೂರಿನಲ್ಲಿ ಉಪ ಚುನಾವಣೆ ನಡೆಯುವ ಸಂದರ್ಭದಲ್ಲಿ ಮಾನ್ಯ ರೆವಿನ್ಯೂ ಮಂತ್ರಿಗಳು ಅಲ್ಲಿಗೆ ಬಂದು ಆ ಕಂದಾಯವನ್ನು ವಸೂಲು ಮಾಡುವುದಕ್ಕೆ 12 ಕಂತುಗಳನ್ನು ಮಾಡುತ್ತೇನೆಂದು ಹೇಳಿದರು. ಈಗ ಅವರು ಆ ಭರವಸೆಯನ್ನು ಉಳಿಸಿಕೊಂಡಿದ್ದಾರೆಯೇ ಅಥವಾ ಚುನಾವಣೆ ಆದಮೇಲೆ ಅದು ಹೋಗುತ್ತದೆಯೇ?

ಶ್ರೀ ಬಿ. ರಾಚಯ್ಯ.—ಅದು ಸಾಮಾನ್ಯವಾಗಿ ಜನವರಿಯಲ್ಲಿ ಕಂದಾಯವನ್ನು ವಸೂಲು ಮಾಡುವುದಕ್ಕೆ ನಾಲ್ಕು ಕಂತುಗಳು ಇರುತ್ತದೆ. ಈ ವರ್ಷ ವಿಶೇಷ ರೀತಿಯಲ್ಲಿ ಮುಂದಿನ ಜನವರಿ ಬರುವವರೆಗೂ ವಸೂಲು ಮಾಡುವುದಕ್ಕೆ ಅವಕಾಶ ಕಲ್ಪಿಸಿಕೊಟ್ಟಿದ್ದೇವೆ.

Sri V. N. PATIL.—The hon. Minister was pleased to give three reasons for non-recovery. They were, untimely rains in non-seasons and village officials not being interested in their work. When the hon. Minister admits untimely rains, it does not raise the capacity of the agriculturist to pay land revenue. Then, how is he justified in ordering collection of land revenue arrears ?

Sri B. RACHAIAH.—That is why, we have fixed easy instalments.

Sri V. N. PATIL.—Instalment is not the sole criterion. In Hyderabad Karnatak area, even one-fourth of the usual crop is not raised. Then how can the agriculturists pay the land revenue ?

Sri B. RACHAIAH.—There are Land Revenue Remission Rules, according to which, Government will consider the postponement of the collection of land revenue and also its remission.

Sri DIGAMBAR RAO B. KALMANKAR.—Has it come to the notice of the Government that in many cases the amounts of land revenue collected by the Village Officers have been misappropriated and this fact is also in the know of the Tahsildars ? Even though they know that the money is not being remitted, no action is being taken against the Village Officers.

Sri B. RACHAIAH.—Here and there, there may be a few cases but they have not come to my notice.

ಶ್ರೀ ಎಸ್. ಎಂ. ಗುರೆಡ್ಡಿ.—ಸ್ವಾಮಿ, ಇಲ್ಲಿ ತಾವು ಕೊಟ್ಟಿರುವ ವಿಷಯವನ್ನು ಪರಿಶೀಲನೆ ಮಾಡಿ ನೋಡಿದರೆ ರಾಯಚೂರು ಜಿಲ್ಲೆಗೆ ನೀರಾವರಿಯನ್ನು ಮಾಡಿಕೊಟ್ಟು ಕಂದಾಯದ ಬಾಕಿ ಹೆಚ್ಚಿಗೆ ಉಳಿದಿದೆ. ಬರಗಾಲ ಪೀಡಿತ ಪ್ರದೇಶವಾದ ಬಿಜಾಪುರ ಜಿಲ್ಲೆಯಲ್ಲಿ ಬಹಳ ಜೋರಾಗಿ ಕಂದಾಯವನ್ನು ವಸೂಲು ಮಾಡಿದ್ದಾರೆ. ಆದ್ದರಿಂದ ಅಲ್ಲಿರತಕ್ಕ ಆಫೀಸರುಗಳು ನರಿಯಾಗಿ ಕೆಲಸ ಮಾಡುತ್ತಿಲ್ಲ. ಕೆಲವು ಕಡೆ ಆಫೀಸರುಗಳು ಕಂದಾಯವನ್ನು ಜೋರಾಗಿ ವಸೂಲು ಮಾಡುತ್ತಾರೆ, ಕೆಲವು ಕಡೆ ನರಿಯಾಗಿ ವಸೂಲು ಮಾಡುವುದಿಲ್ಲ ಎಂದು ಸರ್ಕಾರದ ಗಮನಕ್ಕೆ ಬಂದಿದೆಯೇ ? ಅಂಥಾ ಆಫೀಸರುಗಳ ಮೇಲೆ ಕ್ರಮ ತೆಗೆದುಕೊಳ್ಳುತ್ತೀರಾ ?

ಶ್ರೀ ಬಿ. ರಾಚಯ್ಯ.—ಮಾನ್ಯ ಸದಸ್ಯರ ಅಭಿಪ್ರಾಯ ನರಿಯಾಗಿದೆ ಎಂದು ಕಾಣುತ್ತಿದೆ.

ಶ್ರೀ ಕೆ. ಎಂ. ಪುಟ್ಟಸ್ವಾಮಿ.—ಮಾನ್ಯ ಅಧ್ಯಕ್ಷರೇ, ಮತ್ತು ಮಾನ್ಯ ಕಂದಾಯ ಮಂತ್ರಿಗಳೇ, ಈಗ ದೇಶದಲ್ಲಿ ಜೋತಿಷ್ಯರು ಹೇಳುತ್ತಿದ್ದಾರೆ, ಇನ್ನು ಸುಮಾರು 20 ವರ್ಷಗಳು ಕನಿಷ್ಠ ಸಂವತ್ಸರ ಗಳು ಎಂದು ಹೇಳುತ್ತಿದ್ದಾರೆ. ಕಂದಾಯವನ್ನು ಕೊಡುವುದಕ್ಕೆ ರೈತರಿಗೆ ಶಕ್ತಿ ಬರುವುದಿಲ್ಲವೆಂದು ಹೇಳುತ್ತಾರೆ. ಆದ್ದರಿಂದ ಈ 6 ಕೋಟಿ ರೂಪಾಯಿಗಳ ಕಂದಾಯದ ಬಾಕಿಯನ್ನು ಕೃಷ್ಣನ ಲೆಕ್ಕಕ್ಕೆ ಬರೆಯುವುದಕ್ಕೆ ಬದಲಾಗಿ ರಾಮನ ಲೆಕ್ಕಕ್ಕೆ ಹಾಕಿ ಅದನ್ನು ಏತಕ್ಕೆ ವಜಾಮಾಡಬಾರದು ?

Mr. SPEAKER.—I have disallowed it.

ಶ್ರೀಮತಿ ಬಸವರಾಜೇಶ್ವರಿ.—ರಾಯಚೂರಿನಲ್ಲಿ ಉಳಿಸಿಕೊಂಡಿರತಕ್ಕದ್ದರಲ್ಲಿ ಕಂದಾಯದ ಬಾಕಿ ಮತ್ತು ವಾಟರ್ ರೇಟಿಗೆ ಸಂಬಂಧಪಟ್ಟ ಬಾಕಿ ಎರಡೂ ಮೊತ್ತಗಳೂ ಸೇರಿವೆ. ಆದರಲ್ಲಿ ಕಂದಾಯದ ಬಾಕಿ ಎಷ್ಟು, ವಾಟರ್ ರೇಟಿಗೆ ಸಂಬಂಧಪಟ್ಟ ಬಾಕಿ ಎಷ್ಟು ಎಂಬುದನ್ನು ಅಸೆಸ್ ಮಾಡಿದ್ದೀರಾ ?

ಶ್ರೀ ಬಿ. ರಾಚಯ್ಯ.—ಇರ್ಲಾ, ಸ್ವಾಮಿ.